# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ</u>

## <u>ಎಸ್.ಸಿ. ಸಂಖ್ಯೆ: 1/2020</u>

ಅ.ಸಾ. 11

ದೊ.ಸಾ. 15

| | | |
|---|---|---|
| ಸಾಕ್ಷಿಯ ಹೆಸರು | ಃ | ಸಂಗಪ್ಪ ಪಾಲಭಾವಿ |
| ತಂದೆ ಹೆಸರು | ಃ | ಬಸಪ್ಪ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಪೊಲೀಸ್ ಇನಸ್ಪೆಕ್ಟರ್, ಗ್ರಾಮೀಣ ಪೋಲಿಸ್ ಠಾಣೆ, ವಿಜಯಪುರ |
| ವಾಸಸ್ಥಳ | ಃ | ವಿಜಯಪುರ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | ಃ | 16/12/2021 |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ</u>**

ಅಗಸ್ಟ 2016 ರಿಂದ ಜುಲೈ 2018 ವರೆಗೆ ನಾನು ಗರಗ ಪೋಲಿಸ್ ಠಾಣೆಯಲ್ಲಿ ಪೊಲೀಸ್ ಸಬ್ ಇನಸ್ಪೆಕ್ಟರ್ ಆಗಿ ಕಾರ್ಯನಿರ್ವಹಿಸಿದ್ದೇನೆ.

2. ದಿಃ 02/03/2018 ರಂದು ಈ ಪ್ರಕರಣದ ಕಡತವನ್ನು ಪ್ರಾಸಾ.8 ಎಂ ಎಸ್ ಅಮ್ಮಿನಭಾವಿ ಇವರಿಂದ ಪಡೆದುಕೊಂಡೆ. ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲಿಸಿದೆ. ದಿಃ 02/03/2018 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟೆ. ಸ್ಥಳದಲ್ಲಿ ಸಾಕ್ಷಿದಾರರಾದ ಪ್ರಾಸಾ.2 ರುದ್ರಪ್ಪ ಮುರಾರಿ, ಪ್ರಾಸಾ.3 ರಾಮಕೃಷ್ಣ ಬಡಿಗೇರ, ಪ್ರಾಸಾ.4 ಶಿವಪ್ಪ ನವಲೂರ, ಪ್ರಾಸಾ.6 ಶಿವಪ್ಪ ಹುಲಗಣ್ಣವರ, ಪ್ರಾಸಾ.10 ಚನ್ನಬಸವ್ವ ನಟಗಲ್ ಇವರ ಹೇಳಿಕೆಗಳನ್ನು ಪಡೆದುಕೊಂಡೆ. ನಂತರ ಆರೋಪಿಯ ಪತ್ತೆಗಾಗಿ ಸಿಬ್ಬಂದಿಗಳನ್ನು ನೇಮಿಸಿದೆ.

3. ಠಾಣಾ ಪಿಸಿ ನಂ.713 ಇವರು ದಿಃ 05/03/2018 ರಂದು ಈ ಪ್ರಕರಣದ ಆರೋಪಿಯನ್ನು ಠಾಣೆಗೆ ತಂದು ಹಾಜರಪಡಿಸಿದರು. ನಾನು ಆರೋಪಿಯನ್ನು ವಿಚಾರಣೆ ಮಾಡಿದೆ. ಆತ ಕೃತ್ಯ ಮಾಡಿರುವುದನ್ನು ಒಪ್ಪಿಕೊಂಡ. ಆತನನ್ನು ದಸ್ತಗಿರಿ ಮಾಡಿದೆ. ಸೂಕ್ತ ಜಾಮೀನನ್ನು ಪಡೆದು ಠಾಣೆಯಲ್ಲಿ ಬಿಡುಗಡೆ ಮಾಡಿದೆ. ಆತನನನ್ನು ನೋಡಿದಲ್ಲಿ ಗುರ್ತಿಸುತ್ತೇನೆ.

ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಸಾಕ್ಷಿ ಗುರ್ತಿಸಿದ್ದಾರೆ. ಕೃತ್ಯ ನಡೆದ ಸ್ಥಳ ಪಂಚಾಯಿತಿ ಆಫೀಸ್ ಎನ್ನುವ ಬಗ್ಗೆ ಪಿಡಿಓ., ಹಂಗರಕಿ ಪಂಚಾಯಿತಿಯವರು ದಾಖಲೆಯನ್ನು ಹಾಜರಪಡಿಸಿದರು, ಅದನ್ನು ಪಡೆದುಕೊಂಡೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ನಿಪಿ.12 ಎಂದು ಗುರ್ತಿಸಲಾಯಿತು.

4. ದಿಃ 08/03/2018 ರಂದು ಶ್ರೀಮತಿ ಅನಸೂಯಾ, ಚಾಸಾ.10 ಕಲ್ಲಪ್ಪ ಹುಲಗಣ್ಣವರ, ಚಾಸಾ.11 ಹನಮಂತಪ್ಪ ಜುಮ್ಮಣ್ಣವರ, ಚಾಸಾ.12 ಈರವ್ವ ನವಲಗುಂದ ಇವರ ಹೇಳಿಕೆಗಳನ್ನು ಪಡೆದುಕೊಂಡೆ.

5. ದಿಃ 02/03/2018 ರಂದು ಪ್ರಾಸಾ.7 ಈತನ ಹೇಳಿಕೆಯನ್ನು ಪಡೆದುಕೊಂಡೆ. ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಇದ್ದ ಕಾರಣ ಆತನ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದೇನೆ.

6. ಪ್ರಾಸಾ.3 ನನ್ನ ಮುಂದೆ ನಿಪಿ.3 ಮತ್ತು 4 ರಂತೆ, ಪ್ರಾಸಾ.4 ನನ್ನ ಮುಂದೆ ನಿಪಿ.5 ರಂತೆ, ಪ್ರಾಸಾ.6 ನನ್ನ ಮುಂದೆ ನಿಪಿ.7 ರಂತೆ, ಪ್ರಾಸಾ.8 ನನ್ನ ಮುಂದೆ ನಿಪಿ.11 ರಂತೆ, ಪ್ರಾಸಾ.5 ನನ್ನ ಮುಂದೆ ನಿಪಿ.6 ರಂತೆ, ಪ್ರಾಸಾ.7 ನನ್ನ ಮುಂದೆ ನಿಪಿ.8 ರಂತೆ ನನ್ನ ಮುಂದೆ ಹೇಳಿಕೆಗಳನ್ನು ಕೊಟ್ಟಿದ್ದಾರೆ.

**<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ. ಎನ್ ಹೆಚ್ ಟಿ ವಕೀಲರಿಂದಃ</u>**

7. ದಿಃ 02/03/2018 ರಂದು ಚಾಸಾ.3 ರಿಂದ 13 ಇವರ ಹೇಳಿಕೆಗಳನ್ನು ಪಡೆದಿಲ್ಲ ಹಾಗೂ ಹೇಳಿಕೆಯಲ್ಲಿ ಕಾಣಿಸಿದಂತೆ ಸದರಿ ಸಾಕ್ಷಿದಾರರು ನನಗೆ ಯಾವುದೇ ಹೇಳಿಕೆಗಳನ್ನು ಕೊಟ್ಟಿಲ್ಲ ಅನ್ನುವುದು ಸರಿಯಲ್ಲ.

8. ದಿಃ 05/03/2018 ರಂದು ಆರೋಪಿ ಕೃತ್ಯ ಮಾಡಿದ್ದನ್ನು ಒಪ್ಪಿಕೊಂಡಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ಪ್ರಾಸಾ.3 ನನ್ನ ಮುಂದೆ ನಿಪಿ.3 ಮತ್ತು 4 ರಂತೆ, ಪ್ರಾಸಾ.4 ನನ್ನ ಮುಂದೆ ನಿಪಿ.5 ರಂತೆ, ಪ್ರಾಸಾ.6 ನನ್ನ ಮುಂದೆ ನಿಪಿ.7 ರಂತೆ, ಪ್ರಾಸಾ.8 ನನ್ನ ಮುಂದೆ ನಿಪಿ.11 ರಂತೆ, ಪ್ರಾಸಾ.5 ನನ್ನ ಮುಂದೆ ನಿಪಿ.6 ರಂತೆ, ಪ್ರಾಸಾ.7 ನನ್ನ ಮುಂದೆ

ನಿಪಿ.8 ರಂತೆ ನನ್ನ ಮುಂದೆ ಹೇಳಿಕೆಗಳನ್ನು ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ನಾನು ತನಿಖೆ ಮಾಡುವಾಗ ಆರೋಪಿ ನಿರಪರಾಧಿಯಾಗಿದ್ದಾನೆಂದು ಕಂಡುಬಂದರೂ ಸಹ ನಮ್ಮ ಸಿಬ್ಬಂದಿ ಪ್ರಕರಣವನ್ನು ದಾಖಲಿಸಿ ಭಾಗಶಃ ತನಿಖೆ ಮಾಡಿರುವುದನ್ನು ನೋಡಿ ನಾನು ಯಾಂತ್ರಿಕವಾಗಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದೇನೆ ಅನ್ನುವುದು ಸರಿಯಲ್ಲ.

**ಮರುವಿಚಾರಣೆ:** ಇಲ್ಲ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

16/12/2021

(**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.